**1 ನೇ ಹೆಚ್ಚುವರಿ  ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

**<u>ಸತ್ರ ಮೊಕದ್ದಮೆ  ನಂಃ 95/2024</u>**

| | | |
|---|---|---|
| ಸಾಕ್ಷಿದಾರರ ಹೆಸರು | - ಪ್ರಸನ್ನಕುಮಾರ.ಕೆ.ಕೆ. | ಪಿಡಬ್ಲ್ಯೂ- 04 |
| ತಂದೆಯ ಹೆಸರು | - ಕೆ.ಎಲ್.ಕೃಷ್ಣೇಗೌಡ | ಸಿಡಬ್ಲ್ಯೂ- 04 |
| ವಯಸ್ಸು | - 41 ವರ್ಷ | |
| ಉದ್ಯೋಗ | - ನರ್ಸರಿ | |
| ವಾಸ ಸ್ಥಳ | - ಕೆಳಗೂರು | |

ದಿನಾಂಕಃ 01.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

*(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ **Google meet** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.)*

<u>ಮುಖ್ಯ ವಿಚಾರಣೆ :  ಸರ್ಕಾರಿ ಅಭಿಯೋಜಕರಿಂದ-</u>

1. ಮೃತ ಕನಕ ಗೊತ್ತು, ಆಕೆ ನನ್ನ ಹೆಂಡತಿಯ ಅಕ್ಕ. ಚಾಸಾ.3 ನನ್ನ ಹೆಂಡತಿ. ಫ್ರಾಸಾ.1 ರವರು ಮೃತಳ ಮಗ.  ಸಹ ಪಂಚರಾದ ಚಾಸಾ.2 ಗೊತ್ತು. ಫ್ರಾಸಾ.2 ಮತ್ತು ಚಾಸಾ.10 ಗೊತ್ತು.

2. ದಿಃ 10-05-2024 ರಂದು ಫ್ರಾಸಾ.1 ರವರು ಬೆಳಿಗ್ಗೆ 6.30 ಗಂಟೆಗೆ ನನಗೆ ಫೋನ್ ಮಾಡಿ ತನ್ನ ತಾಯಿ ಕನಕರವರನ್ನು ಯಾರೋ ಕಲ್ಲಿನಿಂದ ಹೊಡೆದು ಕೊಲೆ ಮಾಡಿದ್ದಾರೆ ಎಂದು ತಿಳಿಸಿದರು. ಆಗ ನಾನು ಮತ್ತು ಚಾಸಾ.3 ರವರು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ಹೋದೆವು. ಸದರಿ ಆಸ್ಪತ್ರೆಯ ಶವಗಾರದಲ್ಲಿ ಇರಿಸಿದ್ದ ಕನಕರವರ ಶವವನ್ನು ನೋಡಿದೆವು. ನಂತರ ನಾವು ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಗೆ ಹೋದೆವು. ಫ್ರಾಸಾ.1 ರವರು ಸದರಿ ಪೊಲೀಸರಿಗೆ ದೂರನ್ನು ಕೊಟ್ಟಿದ್ದರು.

3. ನಂತರ ಪುನಃ ನಾವು ಶವಗಾರಕ್ಕೆ ಹೋದೆವು. ಪೊಲೀಸರು ನಮ್ಮೊಂದಿಗೆ ಸದರಿ ಶವಗಾರಕ್ಕೆ ಬಂದರು. ಆ ಸಮಯದಲ್ಲಿ ನಾನು, ಚಾಸಾ.2 ಮತ್ತು 3 ರವರು ಹಾಜರಿದ್ದೆವು. ನಾನು ಕನಕರವರ ಶವವನ್ನು ನೋಡಿದಾಗ ಅವರ ತಲೆ ಮತ್ತು ಮುಖದ ಮೇಲೆ ಗಾಯವಾಗಿ ರಕ್ತ ಬಂದಿತ್ತು ಮತ್ತು ತಲೆ ಹೊಡೆದು ನುಜುಗುಜ್ಜಾಗಿರುವುದು ಕಂಡುಬಂತು. ಕಲ್ಲನ್ನು ಕನಕರವರ ತಲೆಯ ಮೇಲೆ ಎತ್ತಿ ಹಾಕಿ ಕೊಲೆ ಮಾಡಿರುವುದು ಕಂಡುಬಂತು. ಆರೋಪಿ ಪೂರ್ಣೇಶ್ ಕನಕರವರ ಕೊಲೆ ಮಾಡಿದ್ದಾಗಿ ಪೊಲೀಸರಿಂದ ತಿಳಿಯಿತು. ಕನಕರವರ ಶವದ ಮೇಲೆ ಕಿತ್ತಲೆ ಬಣ್ಣದ ನೀಲಿ ಬಣ್ಣದ ಹೂವುಗಳಿರುವ ಚೂಡಿದಾರ ಟಾಪ್, ನೀಲಿ ಬಣ್ಣದ ಸೀರೆ, ಕಂದುಬಣ್ಣದ ವೇಲ್ ಮತ್ತು ಎರಡು ಕಾಲುಗಳ ಬೆರಳುಗಳಲ್ಲಿ ಕಾಲುಂಗರ ಇರುವುದು ಕಂಡುಬಂತು.

4. ಆರೋಪಿ ಕನಕರವರನ್ನು ಕುರಿತು ತನ್ನ ಕಾಲನ್ನು ಒತ್ತುವಂತೆ ಕೇಳಿದಾಗ ಕನಕ ಮತ್ತು ಆರೋಪಿಯ ನಡುವೆ ವಾಗ್ವಾದ ನಡೆದು ಆರೋಪಿ ಕನಕರವರನ್ನು ಫುಟಪಾತಿನ ಮೇಲೆ ತಳ್ಳಿ ಕಲ್ಲನ್ನು ಆಕೆಯ ತಲೆಯ ಮೇಲೆ ಎತ್ತಿಹಾಕಿ ಕೊಲೆ ಮಾಡಿದ್ದಾಗಿ ತಿಳಿಯಿತು. ಆ ಬಗ್ಗೆ ನಾವು ಪೊಲೀಸರಿಗೆ ಅಭಿಪ್ರಾಯವನ್ನು ತಿಳಿಸಿದೆವು. ಪೊಲೀಸರು ಕನಕರವರ ಶವವನ್ನು ಪರೀಕ್ಷಿಸಿ ಮಹಜರ್ ಬರೆದುಕೊಂಡರು. ಆಗ ಸಮಯ ಎಷ್ಟಾಗಿತ್ತು ಎಂದು ನೆನಪಿಲ್ಲ. ಸದರಿ ಮಹಜರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮಹಜರ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಮಹಜರನ್ನು ನಿ.ಪಿ.8 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.8(ಎ) ಎಂದು ಗುರುತಿಸಲಾಯಿತು. ಸದರಿ ಮಹಜರಿಗೆ ನಾನು, ಚಾಸಾ.2 ಮತ್ತು 3 ರವರು ಸಹಿ ಮಾಡಿದ್ದೇವೆ.

5. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ನಿಪಿ.8 ಪಂಚನಾಮೆಗೆ ಸಹಕರಿಸುವಂತೆ ಪೊಲೀಸರು ಸಾಕ್ಷಿಗೆ ನೀಡಿದ್ದಾರೆ ಎನ್ನಲಾದ ನೋಟೀಸಾಗಿದ್ದು, ಅದನ್ನು ನಿಪಿ.9 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.9(ಎ) ಎಂದು ಗುರುತಿಸಲಾಯಿತು.

6. ಸಾಕ್ಷಿಗೆ ಈಗಾಗಲೇ ನಿಪಿ.3 ಮತ್ತು ಪಿ.4 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳನ್ನು ತೋರಿಸಲಾಗಿ ಅವುಗಳನ್ನು ಪೊಲೀಸರು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ

ಶವಗಾರದ ಕಟ್ಟೆಯ ಮೇಲೆ ಕನಕರವರ ಶವ ಪರೀಕ್ಷೆ ನಡೆಸುವ ಸಮಯದಲ್ಲಿ ತೆಗೆದಿದ್ದಾಗಿ ನುಡಿದಿರುತ್ತಾರೆ. ಅವುಗಳ ಪೈಕಿ ನಿಪಿ.3 ರಲ್ಲಿ ತನ್ನ ಚಾಸಾ.2, 3, ಫ್ರಾಸಾ.1 ಮತ್ತು ಪೊಲೀಸರ ಇರುವಿಕೆ ಕಂಡುಬರುವುದಾಗಿ ನುಡಿದಿರುತ್ತಾರೆ. ಸದರಿ ಫೋಟೋಗಳಲ್ಲಿ ಕನಕರವರ ಶವ ಮತ್ತು ಆಕೆಯ ತಲೆ ಮತ್ತು ಮುಖದಲ್ಲಿ ಗಾಯಗಳು ಆಗಿರುವುದು ಕಂಡುಬರುತ್ತದೆ ಎಂದು ನುಡಿದಿರುತ್ತಾರೆ.

7. ಆ ದಿನ ಶವದ ಮೇಲಿದ್ದ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗಾಗಲೇ ಮು.ಮಾ.4 ಮತ್ತು ಮು.ಮಾ.5 ಎಂದು ಗುರುತಿಸಲ್ಪಟ್ಟಿರುವ ಕಿತ್ತಲೆ ಬಣ್ಣದ ಹೂಗಳ ಡಿಸೈನ್ ಇದ್ದ ಚೂಡಿದಾರ ಟಾಪ್ ಮತ್ತು ನೀಲಿ ಬಣ್ಣದ ಸೀರೆಯನ್ನು ನೋಡಿ ಆ ದಿನ ಕನಕರವರ ಶವದ ಮೇಲೆ ನೋಡಿ ಬಟ್ಟೆಗಳು ಅವೇ ಎಂದು ನುಡಿದಿರುತ್ತಾರೆ.

8. ಈಗ್ಗೆ 28 ವರ್ಷಗಳ ಹಿಂದೆ ಕನಕರವರನ್ನು ಚಿಕ್ಕಮಗಳೂರು ಕುರುವಂಗಿಯ ದೇವರಾಜ್ ಎಂಬುವರೊಂದಿಗೆ ಮದುವೆ ಮಾಡಲಾಗಿತ್ತು. ಅವರ ಗಂಡ ಈಗ್ಗೆ 26 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನಂತರ ಕನಕರವರು ಮೂಡಿಗೆರೆ ತಾಲ್ಲೂಕು ನಡುವಿನ ಮಡ್ಕಲ್‌ನಲ್ಲಿರುವ ತನ್ನ ತಂದೆಯ ಮನೆಯಲ್ಲಿ ವಾಸವಾಗಿದ್ದರು. ಆಕೆಗೆ ಖರ್ಚಿಗೆಂದು ಅವರ ಮಗ ಹಣ ಕೊಡುತ್ತಿದ್ದರು, ಆದರೂ ಸಹ ಅವರು ಚಿಕ್ಕಮಗಳೂರು ನಗರದಲ್ಲಿ ಹೋಟೆಲ್ ಒಂದರಲ್ಲಿ ಕೆಲಸ ಮಾಡಿಕೊಂಡಿರುವುದಾಗಿ ಅವರು ಹೇಳಿಕೊಳ್ಳುತ್ತಿದ್ದರು, ಆದರೆ

ಅವರು ಎಲ್ಲಿ ಕೆಲಸ ಮಾಡಿಕೊಂಡಿದ್ದರು ಮತ್ತು ಎಲ್ಲಿ ಉಳಿದುಕೊಳ್ಳುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ವಾರಕ್ಕೆ ಅಥವಾ ತಿಂಗಳಿಗೊಮ್ಮೆ ಅವರು ಊರಿಗೆ ಬಂದು ಹೋಗುತ್ತಿದ್ದರು. ಆ ಬಗ್ಗೆ ಪೊಲೀಸರು ಶವ ತನಿಖೆ ನಡೆಸುವ ಸಮಯದಲ್ಲಿ ನಾನು ಮತ್ತು ಚಾಸಾ.3 ರವರು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

9. ಪೊಲೀಸರು ಶವ ಪಂಚನಾಮೆಯನ್ನು ಜರುಗಿಸುವ ಪೂರ್ವದಲ್ಲಿ ನಿಮಗೆ, ಚಾಸಾ.2 ಮತ್ತು 3 ರವರಿಗೆ ಸದರಿ ಪಂಚನಾಮೆಗೆ ಪಂಚರಾಗಿ ಸಹಕರಿಸಬೇಕೆಂದು ನಿಪಿ.9 ರಂತೆ ನೋಟೀಸನ್ನು ಜಾರಿ ಮಾಡಿದ್ದರು ಎಂದರೆ ಸರಿ. ಪೊಲೀಸರು ನಿಪಿ.8 ರಂತೆ ಶವ ಪಂಚನಾಮೆಯನ್ನು ಬೆಳಿಗ್ಗೆ 9 ಗಂಟೆಯಿಂದ 11.30 ಗಂಟೆಯವರೆಗೆ ಜರುಗಿಸಿದ್ದಾರೆ ಎಂದರೆ ಸರಿ.

<u>ಪಾಟೀ ಸವಾಲುಃ **LADCS** ನ **Deputy Chief Defense counsel** ಆದ ಶ್ರೀ ಎನ್ ಡಿ ವಕೀಲರಿಂದಃ ಆರೋಪಿ ಪರವಾಗಿಃ</u>

10. ನಮ್ಮೂರಾದ ಕೆಳಗೂರಿನಿಂದ ಫ್ರಾಸಾ.1 ರವರ ಊರಿಗೆ ಸುಮಾರು 17 ಕಿ.ಮೀ. ದೂರವಾಗುತ್ತದೆ. ಫ್ರಾಸಾ.1 ರವರು

ನಮ್ಮ ಮನೆಗೆ ಬಂದಾಗ ಬೆಳಿಗ್ಗೆ 7 ಗಂಟೆಯಾಗಿತ್ತು. ನೀವು ಮತ್ತು ಫ್ರಾಸಾ.1 ರವರು ಒಟ್ಟಿಗೆ ಆಸ್ಪತ್ರೆಗೆ ಬಂದಿದ್ದೀರಿ ಎಂದರೆ ಸರಿ. ಆಗ ಆಸ್ಪತ್ರೆಯಲ್ಲಿ ಎಷ್ಟು ಸಮಯ ಇದ್ದೀರಿ ಎಂದರೆ ಸಾಕ್ಷಿ ಗಡಿಬಿಡಿಯಲ್ಲಿ ಸಮಯ ನೆನಪಿಟ್ಟುಕೊಳ್ಳಲು ಆಗಿಲ್ಲ ಎನ್ನುತ್ತಾರೆ. ಅಲ್ಲಿಂದ ಪೊಲೀಸ್ ಠಾಣೆಗೆ ಹೋದಾಗ ಸಮಯ ಎಷ್ಟಾಗಿತ್ತು ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ನಾವು ಮೊದಲಿಗೆ ಶವಗಾರಕ್ಕೆ ಹೋದಾಗ ಅಲ್ಲಿ ಪೊಲೀಸರು ಇರಲಿಲ್ಲ, ನಂತರ ಅಲ್ಲಿಗೆ ಬಂದರು.

11. ಚಾಸಾ.2 ರವರು ನಮ್ಮ ಸಂಬಂಧಿಕರಲ್ಲ, ಆದರೆ ಊರಿನವರು. ಈಗ ಅವರು ಚಿಕ್ಕಮಗಳೂರಿನಲ್ಲಿ ವಾಸವಾಗಿದ್ದಾರೆ. ನಿಪಿ.8 ಮತ್ತು ಪಿ.9 ರಲ್ಲಿ ಏನು ಬರೆದಿದೆ ಎಂದು ಹೇಳಲು ನಿಮಗೆ ಆಗುವುದಿಲ್ಲ ಎಂದರೆ ಸಾಕ್ಷಿ ಸುಮಾರು ದಿನಗಳು ಕಳೆದಿವೆ, ಆಗ ನಾವು ಏನು ಕಂಪ್ಲೆಂಟ್ ಕೊಟ್ಟಿದ್ದೆವೋ ಅದನ್ನು ಬರೆದಿದ್ದಾರೆ, ಈಗ ಅದನ್ನು ಓದದೇ ಹೇಗೆ ಹೇಳಲಿ ಎನ್ನುತ್ತಾರೆ. ದೂರನ್ನು ಫ್ರಾಸಾ.1 ರವರು ಕೊಟ್ಟಿದ್ದಾರೆ. ಕನಕರವರ ಬಗ್ಗೆ ವಿವರಗಳನ್ನು ಪೊಲೀಸರಿಗೆ ಕೊಟ್ಟಿದ್ದನ್ನು ಹೊರತುಪಡಿಸಿ ಬೇರೆ ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸಿಲ್ಲ.

12. ಮು.ಮಾ.4 ಮತ್ತು ಮು.ಮಾ.5 ನ್ನು ನೀವು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡಿದ್ದೀರಿ ಎಂದರೆ ಸರಿಯಲ್ಲ. ಅವುಗಳನ್ನು ಪೊಲೀಸರು ತೆಗೆದುಕೊಂಡ ಬಗ್ಗೆ ನಿಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಶವದ ಮೇಲಿದ್ದ

ಕಾಲುಂಗರುಗಳನ್ನು ಪೋಸ್ಟಮಾರ್ಟಮ್ ಮಾಡುವ ಸಮಯದಲ್ಲಿ ತೆಗೆಯಲಾಗಿತ್ತು, ಆದರೆ ನಂತರದಲ್ಲಿ ಅದನ್ನು ಏನು ಮಾಡಿದರು ಎಂದು ನನಗೆ ಗೊತ್ತಿಲ್ಲ.

13. ದೂರು ಕೊಟ್ಟ ಬಳಿಕ ಪೊಲೀಸ್ ಠಾಣೆಗೆ ಎಷ್ಟು ಬಾರಿ ಹೋಗಿದ್ದೀರಿ ಎಂದರೆ ಸಾಕ್ಷಿ ಒಮ್ಮೆ ಹೋಗಿದ್ದೇನೆ ಎನ್ನುತ್ತಾರೆ. ಆ ದಿನ ಪೊಲೀಸರು ನಿಮ್ಮ ಸಹಿಗಳನ್ನು ಪಡೆದುಕೊಂಡರೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಪಿ.8 ಮತ್ತು ಪಿ.9 ದಾಖಲೆಗಳಿಗೆ ನೀವು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೀರಿ ಎಂದರೆ ಸರಿಯಲ್ಲ.

14. ಆರೋಪಿ ನಮ್ಮ ಕುಟುಂಬಕ್ಕೆ ಸಂಬಂಧಿಸಿದವನಲ್ಲ. ಆರೋಪಿಯನ್ನು ಮೊದಲ ಭಾರಿಗೆ ನ್ಯಾಯಾಲಯದಲ್ಲೇ ನೋಡಿರುವುದು ಎಂದರೆ ಸಾಕ್ಷಿ ದೂರು ಕೊಟ್ಟ ದಿನ ಪೊಲೀಸರು ಆರೋಪಿಯನ್ನು ಆರೆಸ್ಟ್ ಮಾಡಿ ಪೊಲೀಸ್ ಸ್ಟೇಷನಿನ ಸೆಲ್‌ನಲ್ಲಿ ಇರಿಸಿದ್ದಾಗ ನೋಡಿದ್ದೇನೆ ಎನ್ನುತ್ತಾರೆ. ನೀವು ಠಾಣೆಗೆ ಹೋದಾಗ ಆರೋಪಿ ಅಲ್ಲಿ ಇದ್ದನೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

15. ಕನಕರವರಿಗೆ ಮಧ್ಯಪಾನ ಮಾಡುವ ಹವ್ಯಾಸವಿದ್ದು, ಆಕೆ ಮಧ್ಯವನ್ನು ಸೇವಿಸಿ ಬಿದ್ದಾಗ ಆದ ಗಾಯದಿಂದ ಆಕೆ ಮೃತಪಟ್ಟಿದ್ದಾಳೆ ಎಂದರೆ ಸರಿಯಲ್ಲ. ಆಕೆಯ ಸಾವಿಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಮು.ಮಾ.4 ಮತ್ತು ಮು.ಮಾ.5 ಬಟ್ಟೆಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿ ಹಾಜರು ಪಡಿಸಲಾಗಿದೆ ಎಂದರೆ ಸರಿಯಲ್ಲ.

16. ನಾವು ಶವಗಾರಕ್ಕೆ ಹೋದೆವು, ಪೊಲೀಸರು ನಮ್ಮೊಂದಿಗೆ ಸದರಿ ಶವಗಾರಕ್ಕೆ ಬಂದರು, ಆ ಸಮಯದಲ್ಲಿ ನಾನು, ಚಾಸಾ.2 ಮತ್ತು 3 ರವರು ಹಾಜರಿದ್ದೆವು, ನಾನು ಕನಕರವರ ಶವವನ್ನು ನೋಡಿದಾಗ ಅವರ ತಲೆ ಮತ್ತು ಮುಖದ ಮೇಲೆ ಗಾಯವಾಗಿ ರಕ್ತ ಬಂದಿತ್ತು, ತಲೆ ಹೊಡೆದು ನುಜುಗುಜ್ಜಾಗಿರುವುದು ಕಂಡುಬಂತು, ಕಲ್ಲನ್ನು ಕನಕರವರ ತಲೆಯ ಮೇಲೆ ಎತ್ತಿ ಹಾಕಿ ಕೊಲೆ ಮಾಡಿರುವುದು ಕಂಡುಬಂತು, ಆರೋಪಿ ಪೂರ್ಣೇಶ್ ಕನಕರವರ ಕೊಲೆ ಮಾಡಿದ್ದಾಗಿ ಪೊಲೀಸರಿಂದ ತಿಳಿಯಿತು, ಕನಕರವರ ಶವದ ಮೇಲೆ ಮು.ಮಾ.4, ಮು.ಮಾ.5, ಕಂದುಬಣ್ಣದ ವೇಲ್ ಮತ್ತು ಎರಡು ಕಾಲುಗಳ ಬೆರಳುಗಳಲ್ಲಿ ಕಾಲುಂಗರ ಇರುವುದು ಕಂಡುಬಂತು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

17. ಆರೋಪಿ ಕನಕರವರನ್ನು ಕುರಿತು ತನ್ನ ಕಾಲನ್ನು ಒತ್ತುವಂತೆ ಕೇಳಿದಾಗ ಕನಕ ಮತ್ತು ಆರೋಪಿಯ ನಡುವೆ ವಾಗ್ವಾದ ನಡೆದು ಆರೋಪಿ ಕನಕರವರನ್ನು ಫುಟಪಾತಿನ ಮೇಲೆ ತಳ್ಳಿ ಕಲ್ಲನ್ನು ಆಕೆಯ ತಲೆಯ ಮೇಲೆ ಎತ್ತಿಹಾಕಿ ಕೊಲೆ ಮಾಡಿದ್ದಾಗಿ ತಿಳಿಯಿತು, ಆ ಬಗ್ಗೆ ನಾವು ಪೊಲೀಸರಿಗೆ ಅಭಿಪ್ರಾಯವನ್ನು ತಿಳಿಸಿದೆವು, ಪೊಲೀಸರು ಕನಕರವರ ಶವವನ್ನು ಪರೀಕ್ಷಿಸಿ ನಿಪಿ.8 ರಂತೆ ಮಹಜರ್ ಬರೆದುಕೊಂಡರು, ಸದರಿ ಮಹಜರಿಗೆ ನಾನು, ಚಾಸಾ.2 ಮತ್ತು 3 ರವರು ಸಹಿ ಮಾಡಿದ್ದೇವೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

18. ನಿಪಿ.8 ಪಂಚನಾಮೆಗೆ ಸಹಕರಿಸುವಂತೆ ಪೊಲೀಸರು ನಿಪಿ.9 ರಂತೆ ನಿಮಗೆ ನೋಟೀಸ್ನು ಕೊಟ್ಟಿದ್ದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಿಪಿ.3 ಮತ್ತು ಪಿ.4 ಫೋಟೋಗಳನ್ನು ಪೊಲೀಸರು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಗಾರದ ಕಟ್ಟೆಯ ಮೇಲೆ ಕನಕರವರ ಶವ ಪರೀಕ್ಷೆ ನಡೆಸುವ ಸಮಯದಲ್ಲಿ ತೆಗೆದಿದ್ದಾಗಿ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಿಪಿ.3 ಮತ್ತು ಪಿ.4 ಫೋಟೋಗಳನ್ನು ಪೊಲೀಸರು ತೆಗೆದಿದ್ದಾರೆ. ಯಾವ ಸಾಧನದಲ್ಲಿ ಸದರಿ ಫೋಟೋಗಳನ್ನು ತೆಗೆಯಲಾಗಿದೆ ಎಂದರೆ ಸಾಕ್ಷಿ ಗಡಿಬಿಡಿಯಲ್ಲಿ ನಾನು ಗಮನಿಸಿಲ್ಲ ಎನ್ನುತ್ತಾರೆ. ನೀವು ನಿಮ್ಮ ಕುಟುಂಬದವರೊಂದಿಗೆ ಸೇರಿ ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದರ ಅವಶ್ಯಕತೆ ಇಲ್ಲ ಎನ್ನುತ್ತಾರೆ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ